ವೈದ್ಯಕೀಯ ಮಹಾ ವಿದ್ಯಾಲಯಗಳನ್ನು ಸರ್ಕಾರದವರು ವಹಿಸಿಕೊಳ್ಳುವುದು

೭೦೩. ಶ್ರೀ ಎಂ. ವೀರಯ್ಯಸ್ವಾಮಿ (ಬಿಂಜೊಳ್ಳಿ).—ಮಾನ್ಯ ಆರೋಗ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕ್ಯಾಪಿಟೇಶನ್ ಶುಲ್ಕದ ಬಗ್ಗೆ ವಿವಾದವೆದ್ದಿರುವ ಸಾರ್ವಜನಿಕ ಅಭಿಪ್ರಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಖಾಸಗಿಯಾಗಿ ನಡೆಸುತ್ತಿರುವ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುವ ಯೋಚನೆ ಮಾಡಿದೆಯೇ ?

(ಆ) ಇಲ್ಲವಾದರೆ ಸರ್ಕಾರ ಇದನ್ನು ತೆಗೆದುಕೊಳ್ಳಲು ಹಿಂದೇಟು ಹಾಕಲು ಕಾರಣಗಳೇನು ?

ಶ್ರೀ ಎಚ್. ಎಲ್, ತಿಮ್ಮೇಗೌಡ (ಆರೋಗ್ಯ ಸಚಿವರು).—

(ಅ) ಇಲ್ಲ.

(ಆ) ಸರ್ಕಾರವು ಕ್ಯಾಪಿಟೇಶನ್ ಶುಲ್ಕರದ್ದತಿ ಕಾಯಿದೆ ಆಕ್ಟ್ ೧೯೮೪ (ಕ್ಯಾಪಿಟೇಷನ್ ಶುಲ್ಕ ರದ್ದತಿ) ಕಾನೂನನ್ನು ಜಾರಿಗೆ ತಂದಿದೆ. ಈ ಆಕ್ಟ್ ಕ್ಯಾಪಿಟೇಷನ್‌ನ್ನು ತೆಗೆದುಕೊಳ್ಳುವುದನ್ನು ಹಂತ ಹಂತವಾಗಿ ನಿಷೇದಗೊಳಿಸುತ್ತದೆ. ಆಕ್ಟನ್ನು ದೃಷ್ಟಿಯಲ್ಲಿಟ್ಟುಕೊಂಡು ಖಾಸಗಿ ಕಾಲೇಜುಗಳ ಕ್ಯಾಪಿಟೇಷನ್ ಶುಲ್ಕ ತೆಗೆದುಕೊಳ್ಳುತ್ತವೆ ಎಂಬ ಕಾರಣದಿಂದ ಸರ್ಕಾರ ಕಾಲೇಜುಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರ ಪಟ್ಟಿ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).— ೧೫ನೇ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಉತ್ತರಗಳ ೧೫ನೇ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ಮೀನುಗಾರರಿಗೆ ಸಂಕಷ್ಟ ಪರಿಹಾರ

೪೬೩. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಮೀನುಗಾರಿಕೆ ಹಾಗೂ ಬಂದರು ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೀನಿನ ತೀವ್ರ ಕ್ಷಾಮದ ಸಂದರ್ಭದಲ್ಲಿ ಬಹು ಹಿಂದೆ ಸರ್ಕಾರ ನೀಡಿದ ಸಂಕಷ್ಟ ಪರಿಹಾರ ಸಾಲವನ್ನು ಮನ್ನಾ ಮಾಡಲು ಪರಿಶೀಲಿಸುವುದಾಗಿ ಹಿಂದೆ ಕೆಲವು ಬಾರಿ ಸರ್ಕಾರದಿಂದ ವಾಗ್ದಾನ ಬೇರೆ ಬೇರೆ ವೇದಿಕೆಗಳಲ್ಲಿ ಆಗಿದ್ದರೂ ಈ ಬಗ್ಗೆ ಯಾವುದೇ ಅಂತಿಮ ತೀರ್ಮಾನ ಆಗದಿರಲು ಕಾರಣವೇನು?

ಆ) ಅಂಥ ಸಾಲದ ಒಟ್ಟು ಮೊತ್ತವೆಷ್ಟು?

ಇ) ಹೊಸ ಸಾಲ ಪಡೆಯಲು ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಈ ಬಗ್ಗೆ ಆದಷ್ಟು ಬೇಗ ಒಂದು ತೀರ್ಮಾನ ಕೈಗೊಳ್ಳಲಾಗುವುದೇ?

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರು ಸಚಿವರು).—

ಅ) ಈ ಹಿಂದೆ ಮೀನಿನ ಕ್ಷಾಮದ ಸಂದರ್ಭದಲ್ಲಿ ನೀಡಿದ ಸಂಕಷ್ಟ ಪರಿಹಾರ ಸಾಲವನ್ನು ಮನ್ನಾ ಮಾಡುವುದಾಗಿ ಈಗಿನ ಸರ್ಕಾರವು ಯಾವುದೇ ಆಶ್ವಾಸನೆಯನ್ನು ನೀಡಿರುವುದಿಲ್ಲ.

ಆ) ೧) ಮಂಜೂರಾದ ಒಟ್ಟು ಸಾಲ ರೂ. ೬೨,೮೮,೬೦೦-೦೦

೨) ವಸೂಲಿಯಾದ ಒಟ್ಟು ಹಣ ರೂ ೪೪,೨೧,೪೭೭-೦೦

೩) ಬಾಕಿ ಒಟ್ಟು ರೂ. ೧೮,೬೭,೧೨೩-೦೦

೧) ಈ ಸಾಲವು ಸುಸ್ತಿಯಾದಲ್ಲಿಯೂ ಇಲಾಖೆಯಿಂದ ಹೊಸ ಸಾಲ ಪಡೆಯಲು ಯಾವುದೇ ನಿರ್ಬಂಧವಿರುವುದಿಲ್ಲ, ಈ ಸಾಲದ ವಸೂಲಿ ಮುಂದುವರಿಯುವುದು.

ಬೀಡಿ ಕಾರ್ಮಿಕರ ಆರೋಗ್ಯ ರಕ್ಷಣೆ ಬಗ್ಗೆ

೨೫೩. ಶ್ರೀ ಉಮ್ಮರಬ್ಬ.— ಮಾನ್ಯ ಆರೋಗ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾವಿರಾರು ಕುಟುಂಬಗಳು ಬೀಡಿ ಉದ್ಯಮದಲ್ಲಿ ನಿರತರಾಗಿದ್ದು ಇವರ ಆರೋಗ್ಯ ರಕ್ಷಣೆಗಾಗಿ ಎಷ್ಟು ಸಂಚಾರಿ ಆಸ್ಪತ್ರೆಗಳನ್ನು ನಿಯೋಜಿಸಲಾಗಿದೆ.

ಆ) ಅವುಗಳು ಎಲ್ಲೆಲ್ಲಿ ಕಾರ್ಯಪ್ರವೃತ್ತವಾಗಿವೆ?

ಇ) ಇವುಗಳಿಗಾಗಿ ವಾರ್ಷಿಕ ಹಣ ಎಷ್ಟು ವೆಚ್ಚ ಮಾಡಲಾಗಿದೆ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಸಚಿವರು).—

ಅ) ರಾಜ್ಯ ಸರ್ಕಾರದ ಮತ್ತಿತರರಿಂದ ಪ್ರತ್ಯೇಕವಾದ ಸಂಚಾರಿ ಆರೋಗ್ಯ ಘಟಕಗಳ ಬೀಡಿ ಕಾರ್ಮಿಕರಿಗೆ ಇರುವುದಿಲ್ಲ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುಡ್ಡಗಾಡು ಯೋಜನೆಯ ಆಡಿಯಲ್ಲಿ ಒಟ್ಟು ಆಂದರೆ ೨ ಸಂಚಾರಿ ಆಸ್ಪತ್ರೆಗಳು ಮತ್ತು ೧ ಸಂಚಾರಿ ಆರೋಗ್ಯ ಘಟಕವನ್ನು ಮಂಜೂರು ಮಾಡಲಾಗಿದ್ದು ಇವುಗಳು ಗುಡ್ಡಗಾಡು ಗಿರಿಜನರು ಮತ್ತು ಇತರ ಕುಟುಂಬಗಳಿಗೆ (ಬೀಡಿ ಕಾರ್ಮಿಕರ ಕುಟುಂಬಗಳು ಸೇರಿ) ಆರೋಗ್ಯ ರಕ್ಷಣೋಪಕ್ರಮ ಕಾರ್ಯವನ್ನು ನಿರ್ವಹಿಸುತ್ತವೆ.

ಆ) ಮೇಲ್ಕಂಡ ಸಂಚಾರೀ ಆಸ್ಪತ್ರೆಗಳು ಮತ್ತು ಆರೋಗ್ಯ ಘಟಕಗಳು ಈ ಕೆಳಕಂಡ ಸ್ಥಳಗಳಲ್ಲಿ ಚಟುವಟಿಕೆಗಳನ್ನು ನಿರ್ವಹಿಸುತ್ತವೆ.

೧) ಸಂಚಾರಿ ಆಸ್ಪತ್ರೆಗಳು (೨).—

ಅ) ಬಂಟ್ವಾಳ ತಾಲ್ಲೂಕ್ ಬಂಟ್ವಾಳ,
ಆ) ಉಡುಪಿ ತಾಲ್ಲೂಕ್, ಪೆರಮ್ಪೂರ್. } ದಕ್ಷಿಣ ಕನ್ನಡ ಜಿಲ್ಲೆ

೨) ಗಿರಿಜನ ಸಂಚಾರೀ ಆರೋಗ್ಯ ಘಟಕ.— (೧)

ಅ) ಸೂಳ್ಯ ತಾಲ್ಲೂಕ್ ಸೂಳ್ಯ : ದಕ್ಷಿಣ ಕನ್ನಡ ಜಿಲ್ಲೆ.

ಇ) ಗುಡ್ಡಗಾಡು ಯೋಜನೆಯ ಆಡಿಯಲ್ಲಿ ಈ ಕೆಳಕಂಡ ಮೊಬಲಗನ್ನು ಕಳೆದ ಎರಡು ವರ್ಷಗಳಿಗೆ ಎರಡು ಸಂಚಾರಿ ಆಸ್ಪತ್ರೆಗಳು, ಒಂದು ಆರೋಗ್ಯ ಘಟಕಗಳಿಗೆ ನಿಗದಿಪಡಿಸಿ ಅವುಗಳಿಗೆ ತಗುಲಿದ ವೆಚ್ಚ ಈ ಕೆಳಕಂಡಂತಿದೆ.

	ವೆಚ್ಚ ಮಾಡಿದ ಹಣ	
	೧೯೮೪-೮೫	೧೯೮೫-೮೬ (ಡಿಸೆಂಬರ್) ಮಾಹೆ
೧) ಸಂಚಾರಿ ಆಸ್ಪತ್ರೆಗಳು (೨)		
ಅ) ಬಂಟ್ವಾಳ್	೮೭,೧೩೬-೦೦	೬೧,೫೦೮-೦೦
ಆ) ಪೆರಡೂರ್	೯೦,೪೮೦-೦೦	೫೬,೭೨೯-೦೦
೨) ಗಿರಿಜನರ ಆರೋಗ್ಯ ಘಟಕ (೧)		
ಸೂಳ್ಯ	೧,೦೩,೭೧೦-೦೦	೮೯,೪೫೫-೦೦
ಒಟ್ಟು ವೆಚ್ಚ	೨,೮೧,೩೬೬-೦೦	೨,೦೯,೦೮೨-೦೦